# ಮರೆಯ ಬೇಡ ಮನವೆ ನೀನು

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
4. **Note:** The lyrics given without highlights are as per Ref. 1. The lyrics given in yellow highlights are as per Ref. 2 and the lyrics mentioned in green highlights are as per Ref. 3.
5. **Note:** As there are differences in wordings in each book, all the versions are given separately. However, one can follow the wordings in Ref. 2. Also, there are more stanzas in Ref. 2.
6. **Note:** Singer has followed the lyrics as in Ref. 2.
7. **Note:** The Ankita is not same in above references. It is considered Ref.2 as standard and taken that Ankita for listing.

ರಾಗ ಶಂಕರಾಭರಣ ತಾಳ ರೂಪಕ

ಮರೆಯ ಬೇಡ ಮನವೆ ನೀನು, ಹರಿಯ ಚರಣವ
ಅರುಣ ಕಿರಣ ಚರಣ ಶರಣ, ಪಾತಕ ಪಾವನ || ಪ ||

ಸಾಧು ಸಜ್ಜನ ಸಂಗವ ಮಾಡಿ, ವೇದ ಶಾಸ್ತ್ರವನೋದು ನೀ
ಮೋದದಿಂದಲಿ ವೇದಗಮ್ಯನ ಪಾದ ಪಂಕಜ ಧ್ಯಾನಿಸೋ || 1 ||

ಸತಿಯು ಸುತರು ಗತಿಯು ಎಂದು, ಮತಿಯು ಕೆಟ್ಟು ತಿರುಗಬೇಡ
ಮತಿಯು ಕೆಟ್ಟು ಹೋದ ಮೇಲೆ, ಸತಿಯು ಸುತರು ಬರುವರೇನು || 2 ||

ಮಾನುಷ ಜನ್ಮ ದುರ್ಲಭವಿದು, ಮಾಧವನ ಕೃಪೆಯಲಿ ಬಂದಿದೆ

ಹೀನ ಜನರ ಕೂಡಿ ನೀನು, ಹಾನಿ ಮಾಡಿಕೊಳಲು ಬೇಡ || 3 ||

ಪಂಥ ಪಗಡೆಯಾಡಿ ನೀನು, ವ್ಯರ್ಥ ಕಾಲ ಕಳೆಯಬೇಡ
ಅಂತಕನ ದೂತರಿಗೆ ಲೇಶ ಕರುಣವಿಲ್ಲವಯ್ಯ || 4 ||

ಯಾಗಯಜ್ಞ ಮಾಡಲೇಕೆ, ಯೋಗಿ ಯತಿಯು ಆಗಲೇಕೆ
ನಾಗಶಯನ ನಾರದ ವಂದ್ಯನ, ಕೂಗಿ ಭಜನೆ ಮಾಡು ಬೇಗ || 5 ||

ಗೋಪುರದ ಗೊಂಬೆಯಂತೆ, ಗ್ರಾಮ ಗೃಹ ರಕ್ಷಿಪೆನೆಂದು
ತಾಪ ಪಡುತ ಹಗಲು ಇರುಳು, ತಾಮಸ ಜನರ ಕೂಡದೆ || 6 ||

ಹರಿಯ ಸ್ಮರಣೆ ಮಾತ್ರದಿಂದ, ಘೋರ ದುರಿತವೆಲ್ಲ ನಾಶ
ವರದ ಪುರಂದರ ವಿಠ್ಠಲನ್ನ, ನಿರತ ಭಜನೆ ಮಾಡು ಬೇಗ || 7 ||

**Note:** Below lyrics given in lyrics are as per Ref. 1 and Ref. 3 mentioned above.

| | |
|---|---|
| ರಾಗ ಕಮಾಚು ತಾಳ ರೂಪಕ | ರಾಗ ಪೂರ್ವಿ ತಾಳ ರೂಪಕ |
| | |
| ಮರೆಯ ಬೇಡ ಮನವೆ ನೀನು, | ಮರೆಯ ಬೇಡ ಮನವೆ ನೀನು, |
| ಹರಿಯ ಚರಣವ \|\| ಪ \|\| | ಹರಿಯ ಸ್ಮರಣೆಯಾ |
| | |
| ಯಾಗಯಜ್ಞ ಮಾಡಲೇಕೆ, | ಯಾಗಯಜ್ಞ ಮಾಡಲೇಕೆ, |
| ಯೋಗಿ ಯತಿಯು ಆಗಲೇಕೆ | ಯೋಗಿ ಯತಿಯು ಆಗಲೇಕೆ |
| ನಾಗಶಯನ ನಾರದ ವಂದ್ಯನ, | ನಾಗಶಯನ ನಾರದ ವಂದ್ಯನ, |
| ಕೂಗಿ ಭಜನೆ ಮಾಡು ಮನುಜ \|\| 1 \|\| | ಕೂಗಿ ಭಜನೆ ಮಾಡೊ ಬೇಗ |
| | |
| ಸತಿಯು ಸುತರು ಹಿತರು ಎಂದು, | ಸತಿಯು ಸುತರು ಹಿತರು ಎಂದು, |
| ಮತಿಯು ಕೆಟ್ಟು ತಿರುಗಲೇಕೆ | ಮತಿಯಗೆಟ್ಟು ಕೆಡಲಿಬೇಡ |
| ಗತಿಯು ತಪ್ಪಿ ಹೋಗುವಾಗ | ಗತಿಯು ತಪ್ಪಿ ಹೋಗುವಾಗ |
| ಸತಿ ಸುತರು ಬಹರೇನೋ \|\| 2 \|\| | ಸತಿಯು ಸುತರು ಬಾಹೋರೇನು |
| | |
| ಹರಿಯ ಸ್ಮರಣೆ ಮಾತ್ರದಿಂದ, | ಹರಿಯ ಸ್ಮರಣೆ ಮಾತ್ರದಿಂದ, |

| | |
|---|---|
| ದುರಿತ ಕುಲಗಳೆಲ್ಲ ನಾಶ | ಘೋರ ದುರಿತವೆಲ್ಲ ನಾಶ |
| ಪರಮ ಪುರುಷ ಪುರಂದರ ವಿಠಲ | ಪರಮ ಪುರುಷ ಪುರಂದರ ವಿಠಲ |
| ಪರದ ಪದವಿ ಕೊಡುವನೊ    \|\| 3 \|\| | ಪದವಿ ಕೊಡುವ ಪವನನಯ್ಯ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ನಾಮಸ್ಮರಣೆ ಸುಲಭದ ದಾರಿ. ಇಲ್ಲಿ ಕರ್ಮಾನುಷ್ಠಾನದ, ಯೋಗಾಭ್ಯಾಸದ, ತೀವ್ರ ವಿರಕ್ತಿಯ ಅಗತ್ಯವಿರದು. ನಿತ್ಯ ಜೀವನದಲ್ಲಿ ತೊಡಗಿರುತ್ತಲೇ ಮಾಡಬಹುದಾದುದು. ಆದರೆ ಭಕ್ತಿಯ ಬೆಂಬಲವಿರಬೇಕೆಂದು ಸೂಚಿಸಲು 'ಭಜನೆ ಮಾಡೊ' ಎಂದಿದ್ದಾರೆ; ಕೂಗುವುದಷ್ಟೆ ಸಾಲದು.

**ಗತಿಯು ತಪ್ಪಿಹೋಗುವಾಗ** – ಸಾವು ಒದಗುವಾಗ.

**ಪದವಿ (ಪರದ ಪದವಿ)** – ಮುಕ್ತಿ

**ಪವನನಯ್ಯ** – ಮುಖ್ಯಪ್ರಾಣನಿಗೆ ಒಡೆಯನಾದ.

**Classification:** Keerthane
**Ankita:** varada purandara vittala
**Location:** NA
**Category:** Naama Smarane
**Sub-Category:** Krishna, aruna, bhajane, yaga, yogi, shesha, hagalu, irulu, narada, smarane, patni, sura, veda, pankaja, jana, maga, janma, nara, yama,
**Pravachana:** Vid. Kallapur Pavamanachar
**Explanation:** NA